ಬಯಸ್ತಿದೆ. ಅದು ಯಾಕಂತ ನನಗೂ ಗೊತ್ತಿಲ್ಲ. ಅದೇ ಸೆಳೆತ ನನ್ನನ್ನ ಇಲ್ಲಿತನಕ ಕರಕೊಂಡು ಬಂದಿದೆ. ಆದ್ರೆ, ನಾನು ಕೇಳೋದು ಇಷ್ಟೇ–ನನ್ನನ್ನ ತಿರಸ್ಕಾರ ಮಾಡೋದಕ್ಕೆ ನಿಮಗಿರೋ ಮಾನಸಿಕ, ಭೌತಿಕ ಕಾರಣ–ಅಡ್ಡಿ ಆತಂಕಗಳು ಏನು ಅನ್ನೋದು. ನೀವು ಸ್ವೀಕಾರ ಮಾಡ್ತಿರೋ ಇಲ್ವೋ ಅನ್ನೋದು ಎರಡನೇ ಮಾತು. ಆದ್ರೆ ನೀವು ನನ್ನ ತಿರಸ್ಕಾರ ಮಾಡೋದಕ್ಕೆ ಇರೋ ವಾಸ್ತವ ಕಾರಣ ಏನು ಅನ್ನೋದನ್ನ ತಿಳಕೊಬೇಕು ಅನ್ನೋದು.'

'ನಿಮ್ಮ ಪ್ರಶ್ನೆ ಸರಿಯಾಗಿದೆ. ಉತ್ತರನೂ ಸರಳವಾಗಿದೆ. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ನಾನು ಅದನ್ನ ಸಂಕೀರ್ಣವಾಗೇ ಹೇಳಬೇಕಾಗಿದೆ. ನಿಮ್ಮ ಈ ಕುತೂಹಲಕ್ಕೆ ಕಾರಣವಾದ ಪ್ರಶ್ನೆಗೆ ಉತ್ತರವಾಗಿ ನಾನೂ ಒಂದು ಪ್ರಶ್ನೆಯನ್ನೇ ಕೇಳ್ತಿನಿ. ನೀವು ನನ್ನನ್ನ ಬಯಸ್ತೀರಿ ಅಂತ ಗೊತ್ತಾದ ಮಾತ್ರಕ್ಕೆ ನಾನು ಯಾಕೆ ನಿಮ್ಮನ್ನ ಒಪ್ಪಿಕೊಂಡುಬಿಡಬೇಕು. ಅಥವಾ ಒಪ್ಪಿಕೊಳ್ಳದೇ ಯಾಕಿರಬೇಕು? ನೀವು ಇದಕ್ಕೆ ಉತ್ರಾ ಹೇಳಿ.'

'ಇದು ತುಂಬಾ ವಿಚಿತ್ರವಾಗಿದೆ! ಆದ್ರೂ ಹೇಳ್ತಿನಿ ಕೇಳಿ. ನನ್ನ ಹಾಗೆ ನೀವೂ ಒಬ್ಬ ವ್ಯಕ್ತಿಯಾಗಿರೋದರಿಂದ, ಬಯಸಿ ಬಂದ ವ್ಯಕ್ತಿಯ ಬಗ್ಗೆ ಆಸಕ್ತಿ ಇಲ್ಲದಿದ್ರೂ ಕರುಣೆ, ಅಂತಃಕರಣದ ಭಾವದಿಂದ ಒಪ್ಪಿಕೊಬೇಕು ಅನ್ನೋದು ನನ್ನ ಅನಿಸಿಕೆ. ಅದೇ ರೀತಿ ಒಪ್ಪಿಕೊಳ್ಳದೇ ಯಾಕಿರಬೇಕು ಅಂದ್ರೆ, ನಿಮ್ಮ ಬದುಕು, ನಿಮ್ಮ ದೇಹ, ನಿಮ್ಮ ಮನಸು, ಯಾರೋ ಬಯಸಿದ್ರು ಅಂತ ಅದನ್ನ ಅಷ್ಟು ಸರಳವಾಗಿ ಯಾಕೆ ಒಪ್ಪಿಸಬೇಕು. ಸಂಬಂಧಗಳಿಗೆ ಗಟ್ಟಿಯಾದ ಕಾರಣಗಳು ಇರಬೇಕು. ನೀವೇನು ಅಂತನೇ ಗೊತ್ತಿಲ್ಲದ ವ್ಯಕ್ತಿಯನ್ನ ನೀವ್ಯಾಕೆ ಒಪ್ಪಿಕೊಬೇಕು ಅನ್ನೋದು.'

'ಕರೆಕ್ಟಾಗಿ ಹೇಳಿದ್ರಿ. ನಿಮ್ಮನ್ನ ನಾನು ಸ್ವೀಕಾರ ಮಾಡೋದಕ್ಕೆ ನನ್ನಲ್ಲಿ ಕರುಣೆ, ಅಂತಃಕರಣ ಇರಬೇಕು ಅಥವಾ ಬಲವಾದ ಕಾರಣ ಇರಬೇಕು ಅನ್ನೋದು ನಿಮ್ಮ ತೀರ್ಪು. ಈಗ ನಾನು ನಿಮ್ಮನ್ನ ಯಾಕೆ ಒಪ್ಪಿಗೊಬೇಕು, ಯಾಕೆ ಒಪ್ಪಿಗೊಬಾರದು ಅಂತ ಹೇಳ್ತಿನಿ. ನೀವು ಈಗಾಗಲೇ ಮದುವೆಯಾಗಿ ಸಂಸಾರಿಯಾದವ್ರು. ನಾನೂ ಕೂಡ ಮದುವೆಯಾಗಿ ಇನ್ನೊಬ್ಬನ ಪತ್ನಿಯಾಗಿದ್ದವಳು. ಹೀಗಿರೋ ನಮ್ಮಿಬ್ಬರ ಆಕರ್ಷಣೆ, ಪ್ರೀತಿ, ಸಲುಗೆ, ಸಂಬಂಧವನ್ನ ಯಾವ ಸಮಾಜ ತಾನೆ ಒಪ್ಪಿಕೊತದೆ? ಅಷ್ಟಕ್ಕೂ ನನಗೆ ಆಸಕ್ತಿ ಇದೆ ಅಂತಾನೇ ಇಟ್ಕೊಳ್ಳಿ. ನಮ್ಮ ಸಂಬಂಧವನ್ನ ಸಮಾಜ, ಜನಾ ಏನಂತ ಕರೀತಾರೆ ಹೇಳಿ? ಅದಕ್ಕಾಗಿ ನೀವು ನನಗೆ ಬೇಕು ಅನಿಸಿದ್ರೂ ಬೇಡ. ಅಲ್ಲದೇ ಇನ್ನೊಂದು ಆಯಾಮದಲ್ಲಿ ನಿಮ್ಮನ್ನ ನಾನು ಒಪ್ಪಿಕೊಳ್ಳಬೇಕು ಅಂತ ಹೇಳ್ತಿನಿ. ಯಾಕಂದ್ರೆ ನಾನು ಈ ಸಮಾಜ, ಜನರಿಗಾಗಿ ಬದುಕಬೇಕಾಗಿಲ್ಲ. ನನ್ನ ಬದುಕು, ನನ್ನ ಮನಸ್ಸು, ನನ್ನ ದೇಹ ನಂದು. ಅದನ್ನ ನನ್ನಿಷ್ಟದಂತೆ ಅನುಭವಿಸೋದು ನನ್ನ ನಿರ್ಧಾರಕ್ಕೆ ಬಿಟ್ಟಿದ್ದು. ಸಂಬಂಧಗಳು ಮದುವೆ, ಸಂಸಾರಿಕ ಪರಿಧಿಗೆ ಮಾತ್ರ ಸೀಮಿತವಾಗಿರಬೇಕಿಲ್ಲ. ಅವನ್ನ ನಿರ್ಧರಿಸುವ ಸ್ವಾತಂತ್ರ್ಯ ನಮಗಿದೆ. ಹಾಗಾಗಿ ನೀವು ನನಗೆ ಬೇಕು ಅನಿಸಿದ್ರೆ ನಾನು ಒಪ್ಪಿಕೊಬೇಕು. ಅಲ್ವೆ?'

'ಹೌದು. ಮೇದಿನಿ ನಿಜ ಹೇಳಿದ್ರಿ. ಈಗ ನೀವು ನನ್ನ ವೈಚಾರಿಕ ಪರಿಧಿಯೊಳಗೆ ಬರತಿದ್ದೀರಿ. ನಾನು ಹೇಳಬೇಕು ಅನ್ಕೊಂಡಿದ್ದ ತರ್ಕವನ್ನ ನೀವೇ ಹೇಳಿದ್ರಿ. ನನಗೆ ನಿಜವಾಗ್ಲೂ ಖುಷಿಯಾಗ್ತಿದೆ. ಯಾಕಂದ್ರೆ ನೀವು ನನಗೆ ಸಿಗ್ತಿರೊ ಇಲ್ವೊ ಗೊತ್ತಿಲ್ಲ. ಹೆಣ್ಣು ಗಂಡಿನ ಸಂಬಂಧಗಳ ವಿಚಾರದಲ್ಲಿ ನೀವೂ ಕೂಡ ನನ್ನ ಸಿದ್ಧಾಂತವನ್ನು ಒಪ್ಪಿಕೊಂಡಿದ್ದೀರಲ್ಲಾ ಅನ್ನೋದೇ ನನಗೆ ಸಂತೋಷ. ನಮ್ಮಿಬ್ಬರ ಆಲೋಚನಾ ಕ್ರಮ ಒಂದೇ ಇದೆ ಮೇದಿನಿ. ಥ್ಯಾಂಕ್ ಯೂ.'

'ಈಗೇನು ನಮ್ಮಿಬ್ಬರ ದೃಷ್ಟಿ, ಗುರಿ ಒಂದೇ ಇದೆ. ನಮ್ಮಿಬ್ಬರ ಮನಸು, ದೇಹನೂ ಒಂದಾಗಬೇಕು ಅಂತ ತಾನೆ ನೀವು ಹೇಳಬೇಕು ಅಂತಿರೋದು.'

'ಮೇದಿನಿ ಅದಲ್ಲ... ಆದ್ರೆ...'